# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 348
2. ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸುವ ದಿನಾಂಕ : 18.07.2024
4. ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಯಾವ ಯಾವ ನದಿಗಳು ವ್ಯಾಜ್ಯಕ್ಕೆ ಒಳಪಟ್ಟಿವೆ; ವ್ಯಾಜ್ಯಕ್ಕೆ ಒಳಪಟ್ಟ ನದಿಗಳ ವಿಚಾರವಾಗಿ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದೆ;(ಸಂಪೂರ್ಣ ವಿವರ ನೀಡುವುದು) | ರಾಜ್ಯದ ಕಾವೇರಿ, ಕೃಷ್ಣಾ, ಮಹದಾಯಿ, ಗೋದಾವರಿ, ಪೆನ್ನಾರ್ ಹಾಗೂ ಪಾಲಾರ್ ನದಿಗಳು ಅಂತರ್ ರಾಜ್ಯ ಜಲ ವಿವಾದಕ್ಕೆ ಒಳಪಟ್ಟಿವೆ.<br><br>ಅಂತರ್ ರಾಜ್ಯ ಜಲ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಹಾಗೂ ಇತರೆ ನದಿ ಕಣಿವೆಗಳ ರಾಜ್ಯಗಳು ಹೂಡಿರುವ ಮೊಕದ್ದಮೆಗಳ / ಪ್ರಕರಣಗಳ ವಿವರಗಳು ಹಾಗೂ ವಿಚಾರಣೆಯ ಪ್ರಸ್ತುತ ಹಂತದ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ಸದರಿ ಮೊಕದ್ದಮೆಗಳ ವಿಚಾರಣೆ ಪ್ರಸ್ತುತ ಯಾವ ಹಂತದಲ್ಲಿದೆ; (ಮೊಕದ್ದಮೆವಾರು ವಿವರ ನೀಡುವುದು) | |
| ಇ) | ಈವರೆವಿಗೂ ನದಿಗಳ ವ್ಯಾಜ್ಯ ವಿಚಾರವಾಗಿ (ವ್ಯಾಜ್ಯ ಇತ್ಯರ್ಥ ಗೊಂಡಿದ್ದರೂ) ವಕೀಲರಿಗೆ ಪಾವತಿಸಲಾದ ಶುಲ್ಕ ಎಷ್ಟು? (ನದಿ ವ್ಯಾಜ್ಯವಾರು / ವಕೀಲರವಾರು ಮಾಹಿತಿ ನೀಡುವುದು) | ಈವರೆವಿಗೂ ನದಿಗಳ ವ್ಯಾಜ್ಯ ವಿಚಾರವಾಗಿ ವಕೀಲರಿಗೆ ಪಾವತಿಸಲಾದ ಶುಲ್ಕಗಳ ಕುರಿತು ಮಾಹಿತಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ. |

**ಸಂಖ್ಯೆ: ಜಸಂಇ 40 ಕಾವಿಇ 2024**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು

ಅನುಬಂಧ-1

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| I | **ಕಾವೇರಿ ಜಲ ವಿವಾದಗಳ ಬಗ್ಗೆ:** | |
| 1. | **ಮೇಕೆದಾಟು ಯೋಜನೆಗೆ ಸಂಬಂಧಿಸಿದ ಪ್ರಕರಣಗಳು :** | |
| | (ಅ) ಮಿಸಲೆನಿಯಸ್ ಅರ್ಜಿ (ಎಂ.ಎ) ಸಂಖ್ಯೆ :3127/2018 ಇನ್ ಸಿವಿಲ್ ಅಪೀಲ್ (ಸಿ.ಎ) 2453/2007 (ದಿನಾಂಕ: 30.11.2018 ರಂದು ತಮಿಳುನಾಡು ರಾಜ್ಯ ಸರ್ಕಾರವು ದಾಖಲಿಸಿರುತ್ತದೆ.) | ಮೇಕದಾಟು ಯೋಜನಾ ವರದಿಯನ್ನು ಸಿದ್ಧಪಡಿಸಲು ಕೇಂದ್ರ ಜಲ ಆಯೋಗವು ಕರ್ನಾಟಕಕ್ಕೆ ನೀಡಿರುವ ದಿನಾಂಕ:22.11.2018ರ ಅನುಮತಿ ಪತ್ರವನ್ನು ಅನುಷ್ಠಾನಗೊಳಿಸದಂತೆ ಪ್ರಾರ್ಥಿಸಿ ತಮಿಳುನಾಡು ರಾಜ್ಯವು ದಿನಾಂಕ: 30.11.2018 ರಂದು ಸರ್ವೋಚ್ಛ ನ್ಯಾಯಾಲಯದ ಮುಂದೆ ಅರ್ಜಿ (ಮಿಸಲೆನಿಯಸ್ ಅಪ್ಲಿಕೇಷನ್ ಸಂಖ್ಯೆ 3127/2018–ಸಿವಿಲ್ ಅಪೀಲ್ 2453/2007 ಪ್ರಕರಣದಲ್ಲಿ) ಸಲ್ಲಿಸಿದೆ. ಇದಕ್ಕೆ ಕರ್ನಾಟಕ ರಾಜ್ಯವು ದಿನಾಂಕ: 04.01.2019 ರಂದು ತನ್ನ ಉತ್ತರಗಳನ್ನು ಸಲ್ಲಿಸಿದೆ ಹಾಗೂ ಕರ್ನಾಟಕ ರಾಜ್ಯವು ದಿನಾಂಕ 21.01.2019 ರಂದು Affidavit placing on record subsequent events on behalf of the State of Karnataka ಅನ್ನು ಸಲ್ಲಿಸಿದೆ. ಇತ್ತೀಚೆಗೆ ಮಿಸೆಲೇನಿಯಸ್ ಅರ್ಜಿ 3127/2018 ರಲ್ಲಿ ತಮಿಳುನಾಡು ರಾಜ್ಯವು ಸರ್ವೋಚ್ಛ ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ (I.A No.84201/2022, I.A No.84197/2022) ಗಳನ್ನು ದಿನಾಂಕ: 08.06.2022 ರಂದು ದಾಖಲಿಸಿದೆ. ತದನಂತರ ಕರ್ನಾಟಕ ರಾಜ್ಯವು ಸದರಿ ಮಧ್ಯಂತರ ಅರ್ಜಿಗಳಿಗೆ ಪ್ರತ್ಯುತ್ತರಗಳನ್ನು ದಿನಾಂಕ 18.07.2022 ಮತ್ತು 19.07.2022 ರಂದು ಕ್ರಮವಾಗಿ ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಿಸಿದೆ. ದಿನಾಂಕ 23.07.2022 ರಂದು ತಮಿಳುನಾಡು ರಾಜ್ಯವು ರಿಜಾಯಿಂಡರ್ ಗಳನ್ನು ದಾಖಲಿಸಿದೆ. ಇದಕ್ಕೆ ಕರ್ನಾಟಕ ರಾಜ್ಯವು ದಿನಾಂಕ: 08.08.2022ರಂದು Sur-Rejoinder ಅರ್ಜಿಯನ್ನು ಸರ್ವೋಚ್ಛ ನ್ಯಾಯಾಲಯದ ಮುಂದೆ ದಾಖಲಿಸಿದೆ. CWMA ಯು ತಮಿಳುನಾಡಿನ ಮಧ್ಯಂತರ ಅರ್ಜಿಗಳಿಗೆ ಪ್ರತ್ಯುತ್ತರವನ್ನು ದಿನಾಂಕ 07.09.2022 ರಂದು ಸರ್ವೋಚ್ಛ ನ್ಯಾಯಾಲಯದ ಮುಂದೆ ದಾಖಲಿಸಿದೆ. ತಮಿಳುನಾಡು ರಾಜ್ಯವು ದಿನಾಂಕ: 11.11.2022 ರಂದು ಕರ್ನಾಟಕ ರಾಜ್ಯದ Sur-Rejoinder ಗೆ ತನ್ನ ಪ್ರತ್ಯುತ್ತರವನ್ನು ನೀಡಿದೆ. ತಮಿಳುನಾಡು ರಾಜ್ಯವು ದಿನಾಂಕ |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| | | 22.11.2022 ರಂದು CWMA ಯು ದಾಖಲಿಸಿದ ಪ್ರತ್ಯುತ್ತರ ಅರ್ಜಿಗೆ Rejoinder ಅನ್ನು ದಾಖಲಿಸಿದೆ. ಸದರಿ ಪ್ರಕರಣವನ್ನು ಸರ್ವೋಚ್ಚ ನ್ಯಾಯಾಲಯವು ದಿನಾಂಕ: 26.07.2022 ರಂದು ವಿಚಾರಣೆಗೆ ಕೈಗೆತ್ತಿಕೊಂಡು ಈ ಕೆಳಗಿನಂತೆ ಆದೇಶಿಸಿದೆ.<br>*" I.A NO. 84201/2022 AND 84197/22:*<br>***A request for adjournment is made on the ground that the learned Solicitor General is unavailable due to indisposition.***<br>***Mr. Shyam Divan, learned senior counsel appearing for the State of Karnataka submits that rejoinder affidavit has been filed, in response to which certain*** *instructions are awaited.*<br>*He also prays for time.*<br>*Resultantly, we defer the hearing of this matter till 10.08.2022.*<br>***We agree with the submission made across the Bar that these applications along with miscellaneous application and connected applications need to proceed before the three Judge Bench. Registry to do the needful."*** ಪ್ರಕರಣವು ದಿನಾಂಕ: 25.08.2023 ರಂದು ಎಂ.ಎ. ಸಂಖ್ಯೆ: 1871/2023 ರೊಂದಿಗೆ ತ್ರಿಸದಸ್ಯ ಪೀಠದ ಮುಂದೆ ವಿಚಾರಣೆಗೆ ಪಟ್ಟಿಯಾಯಿತಾದರೂ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶ ಬಂದಿರುವುದಿಲ್ಲ.<br>ದಿನಾಂಕ 21.09.2023ರಂದು 1871/2023 ಪ್ರಕರಣದ ವಿಚಾರಣೆಯನ್ನು ನಡೆಸಿದ ಸರ್ವೋಚ್ಚ ನ್ಯಾಯಾಲಯವು 1871/2023 ಪ್ರಕರಣವನ್ನು ವಜಾಗೊಳಿಸಿದ್ದು, I.A.No 84201/2022 in M.A.No 3127/2018 ಅನ್ನು ಎರಡು ವಾರಗಳ ನಂತರ ಪಟ್ಟಿ ಮಾಡಲು ಆದೇಶಿಸಿತು. 21.09.2023ರ ಆದೇಶದ ಉದ್ಧೃತ ಭಾಗ ಈ ಕೆಳಗಿನಂತಿದೆ.<br>"......<br>I.A. NOS. 84201/2022 & M.A. NO. 1869/2023 & REST OF THE MATTERS<br>**List after two weeks."**<br><br>ಸರ್ವೋಚ್ಚ ನ್ಯಾಯಾಲಯದ ಅಂತರ್ ಜಾಲದಿಂದ ಪಡೆದ ಮಾಹಿತಿಯಂತೆ, ಸದರಿ ವಿಷಯವು ವಿಚಾರಣೆಗೆ ಪಟ್ಟಿಯಾಗಿರುವುದಿಲ್ಲ. |
| | (ಆ) ಸಿವಿಲ್ ಅಪೀಲ್ (ಸಿ.ಎ) ಸಂಖ್ಯೆ: 5608/2021<br>ದಿನಾಂಕ: 11.08.2021 ರಂದು ತಮಿಳುನಾಡು ರಾಜ್ಯ ಸರ್ಕಾರವು | ತಮಿಳುನಾಡು ರಾಜ್ಯವು ಕರ್ನಾಟಕ ರಾಜ್ಯದ ವಿರುದ್ಧ ಸಿವಿಲ್ ಅಪೀಲ್ ಸಂಖ್ಯೆ 5608/2021 ಅನ್ನು ದಿನಾಂಕ 11.08.2021 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ದಾಖಲಿಸಿದೆ. ಇದರಲ್ಲಿ |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| | ದಾಖಲಿಸಿರುತ್ತದೆ. | ಕರ್ನಾಟಕದ ಪ್ರಸ್ತಾಪಿತ ಮೇಕೆದಾಟು ಯೋಜನೆಯ ಸ್ಥಳದಲ್ಲಿ ಕಾಮಗಾರಿ ಚಟುವಟಿಕೆಗೆ ಸಂಬಂಧಿಸಿದಂತೆ ಮಾನ್ಯ ಹಸಿರು ನ್ಯಾಯಾಧಿಕರಣ, ನವದೆಹಲಿಯು ದಿನಾಂಕ 17.06.2021 ರಂದು ಹೊರಡಿಸಿದ ಆದೇಶವನ್ನು ಪರಿಗಣಿಸದಂತೆ ಹಾಗೂ ತಮಿಳುನಾಡು ರಾಜ್ಯದ ಪ್ರಸ್ತುತ ಮನವಿಯನ್ನು ಒಪ್ಪುವಂತೆ ಕೋರಲಾಗಿದೆ. ದಿನಾಂಕ: 24.09.2021 ರಂದು ಕರ್ನಾಟಕ ರಾಜ್ಯವು ಕೇವಿಯೇಟನ್ನು ಸಲ್ಲಿಸಿದೆ. ದಿನಾಂಕ:01.05.2024 ರಂದು ಕರ್ನಾಟಕ ರಾಜ್ಯವು ಕೌಂಟರ್ ಅಫಿಡವಿಟ್ (ಕಂಡಿಕೆವಾರು ಉತ್ತರಗಳು) ದಾಖಲಿಸಿದೆ.<br><br>ದಿನಾಂಕ: 26.07.2022ರ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಮಿಸಲೆನಿಯಸ್ ಅರ್ಜಿ (ಎಂ.ಎ) 3127/2018, ಸಿವಿಲ್ ಅಪೀಲ್ (ಸಿ.ಎ) 5608/2021 ಹಾಗೂ ಮಿಸಲೆನಿಯಸ್ ಅರ್ಜಿ (ಎಂ.ಎ) 93/2022 ಸೇರಿದಂತೆ ಎಲ್ಲಾ ಸಂಬಂಧಪಟ್ಟ ಅರ್ಜಿಗಳನ್ನು ಲಿಂಕ್ ಮಾಡಲಾಗಿದೆ. ಈ ಪ್ರಕರಣವು ದಿನಾಂಕ: 25.08.2023 ರಂದು ಮಿಸಲೆನಿಯಸ್ ಅರ್ಜಿ (ಎಂ.ಎ) ಸಂಖ್ಯೆ 1871/2023 ರೊಂದಿಗೆ ತ್ರಿಸದಸ್ಯ ಪೀಠದ ಮುಂದೆ ವಿಚಾರಣೆಗೆ ಪಟ್ಟಿಯಾಯಿತಾದರೂ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶ ಬಂದಿರುವುದಿಲ್ಲ.<br><br>ದಿನಾಂಕ:21.09.2023ರಂದು 1871/2023 ಪ್ರಕರಣದ ಜೊತೆಗೆ ಸದರಿ ಪ್ರಕರಣವನ್ನು ವಿಚಾರಣೆಯನ್ನು ನಡೆಸಿದ ಸರ್ವೋಚ್ಚ ನ್ಯಾಯಾಲಯವು 1871/2013 ಪ್ರಕರಣವನ್ನು ವಜಾಗೊಳಿಸಿ, I.A.No 84201/2022 in M.A.No 3127/2018 ಅನ್ನು ಎರಡು ವಾರಗಳ ನಂತರ ಪಟ್ಟಿ ಮಾಡಲು ಆದೇಶಿಸಿತು.<br>ಸರ್ವೋಚ್ಚ ನ್ಯಾಯಾಲಯದ ಅಂತರ್ ಜಾಲದಿಂದ ಪಡೆದ ಮಾಹಿತಿಯಂತೆ ಸದರಿ ಪ್ರಕರಣವು ವಿಚಾರಣೆಗೆ ಪಟ್ಟಿಯಾಗಿರುವುದಿಲ್ಲ. |
| | (ಇ) ಮಿಸಲೆನಿಯಸ್ ಅರ್ಜಿ (ಎಂ.ಎ) ಸಂಖ್ಯೆ: 93/2022<br>ಇನ್ ಸಿವಿಲ್ ಅಪೀಲ್(ಸಿ.ಎ) ಸಂಖ್ಯೆ 2543/2007<br>ದಿನಾಂಕ: 27.08.2021 ರಂದು ತಮಿಳುನಾಡು ರಾಜ್ಯ ಸರ್ಕಾರವು ದಾಖಲಿಸಿರುತ್ತದೆ. (22.02.2022 ರಂದು ನೊಂದಣಿ ಆಗಿರುತ್ತದೆ). | ತಮಿಳುನಾಡು ರಾಜ್ಯವು ಕರ್ನಾಟಕ ರಾಜ್ಯದ ವಿರುದ್ಧ ಸರ್ವೋಚ್ಚ ನ್ಯಾಯಾಲಯ ಮುಂದೆ ದಿನಾಂಕ: 27.08.2021 ರಂದು ಮಿಸಲೆನಿಯಸ್ ಅರ್ಜಿ ಸಂಖ್ಯೆ: 93/2022 ಇನ್ ಸಿವಿಲ್ ಅಪೀಲ್ ಸಂಖ್ಯೆ 2543/2007 ಅನ್ನು ದಾಖಲಿಸಿದೆ. ದಿನಾಂಕ:22.01.2022ರಂದು ರಿಜಿಸ್ಟರ್ ಆಗಿದೆ. ಇದರಲ್ಲಿ ತಮಿಳುನಾಡು ರಾಜ್ಯವು ಪ್ರಸ್ತಾಪಿತ ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ತಿರಸ್ಕರಿಸಲು ಮತ್ತು ಹಿಂತಿರುಗಿಸಲು ಕೇಂದ್ರ ಜಲ ಆಯೋಗಕ್ಕೆ ನಿರ್ದೇಶನ ನೀಡುವಂತೆ ಕೋರಿ ಹಾಗೂ ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ಯಾವುದೇ ತೀರುವಳಿಗಳನ್ನು ನೀಡದಂತೆ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯವನ್ನು ತಡೆಹಿಡಿಯುವಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ದಾಖಲಿಸಿದೆ. |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| | | ದಿನಾಂಕ: 26.07.2022ರ ಸರ್ವೋಚ್ಛ ನ್ಯಾಯಾಲಯದ ಆದೇಶದ ಪ್ರಕಾರ ಮಿಸಲೆನಿಯಸ್ ಅರ್ಜಿ (ಎಂ.ಎ) 3127/2018, ಸಿವಿಲ್ ಅಪೀಲ್ (ಸಿ.ಎ) 5608/2021 ಹಾಗೂ ಮಿಸಲೆನಿಯಸ್ ಅರ್ಜಿ (ಎಂ.ಎ)93/2022 ಸೇರಿದಂತೆ ಎಲ್ಲಾ ಸಂಬಂಧಪಟ್ಟ ಅರ್ಜಿಗಳನ್ನು ಲಿಂಕ್ ಮಾಡಲಾಗಿದೆ, ಈ ಪ್ರಕರಣವು ದಿನಾಂಕ: 25.08.2023 ರಂದು ಎಂ.ಎ. ಸಂಖ್ಯೆ: 1871/2023 ರೊಂದಿಗೆ ವಿಚಾರಣೆಗೆ ತ್ರಿಸದಸ್ಯ ಪೀಠದ ಮುಂದೆ ಪಟ್ಟಿಯಾಯಿತಾದರೂ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶ ಬಂದಿರುವುದಿಲ್ಲ. ದಿನಾಂಕ 21.09.2023ರಂದು 1871/2023 ಪ್ರಕರಣದ ವಿಚಾರಣೆಯನ್ನು ನಡೆಸಿದ ಸರ್ವೋಚ್ಛ ನ್ಯಾಯಾಲಯವು 1871/2013 ಪ್ರಕರಣವನ್ನು ವಜಾಗೊಳಿಸಿ, I.A.No 84201/2022 in M.A.No 3127/2018 ಅನ್ನು ಎರಡು ವಾರಗಳ ನಂತರ ಪಟ್ಟಿ ಮಾಡಲು ಆದೇಶಿಸಿತು.<br><br>ಸರ್ವೋಚ್ಛ ನ್ಯಾಯಾಲಯದ ಅಂತರ್ ಜಾಲದಿಂದ ಪಡೆದ ಮಾಹಿತಿಯಂತೆ ಸದರಿ ಪ್ರಕರಣವು ವಿಚಾರಣೆಗೆ ಪಟ್ಟಿಯಾಗಿರುವುದಿಲ್ಲ. |
| 2. | ಮೂಲ ದಾವೆ (ಒ.ಎಸ್) ಸಂಖ್ಯೆ : 4/2013 ದಿನಾಂಕ: 26.08.2013 ರಂದು ತಮಿಳುನಾಡು ರಾಜ್ಯ ಸರ್ಕಾರವು ದಾಖಲಿಸಿರುತ್ತದೆ. (2012-13ರ ಜಲ ವರ್ಷದಲ್ಲಿ-ಬೆಳೆ ನಷ್ಟ ಪರಿಹಾರ ಕುರಿತು) | 2012-13ರ ಸಾಲಿನಲ್ಲಿ ನ್ಯಾಯಾಧಿಕರಣದ ಮಧ್ಯಂತರ ಆದೇಶದ ಅನ್ವಯ ತಮಿಳುನಾಡಿಗೆ ಹರಿಸಬೇಕಾದ ನೀರನ್ನು ಬಿಡುಗಡೆ ಮಾಡದೇ ಇರುವ ಕಾರಣ ಬೆಳೆ ನಾಶ ಇತ್ಯಾದಿಗಳಿಂದ ಉಂಟಾದ 2479.7 ಕೋಟಿ ರೂಗಳ ನಷ್ಟಕ್ಕೆ ಪರಿಹಾರ ನೀಡಬೇಕೆಂದು ಕರ್ನಾಟಕ ರಾಜ್ಯದ ವಿರುದ್ಧ ದಿನಾಂಕ: 26.08.2013 ರಂದು ಮೂಲ ದಾವೆ ಸಂಖ್ಯೆ: 04/2013 ಅನ್ನು ಸಲ್ಲಿಸಿದೆ. ಇದಕ್ಕೆ ಪ್ರತಿಯಾಗಿ ಕರ್ನಾಟಕ ರಾಜ್ಯವು ದಿನಾಂಕ:10.03.2015 ರಂದು ಲಿಖಿತ ಹೇಳಿಕೆಯನ್ನು ದಾಖಲಿಸಿದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ತಮಿಳುನಾಡಿನ ಮೂವರು ಸಾಕ್ಷಿದಾರರಿಂದ ಹಾಗೂ ಕರ್ನಾಟಕ ರಾಜ್ಯದ ಒಬ್ಬ ಸಾಕ್ಷಿದಾರರಿಂದ ಪಾಟಿ ಸವಾಲು ಮುಗಿದಿದೆ.<br>ಕರ್ನಾಟಕದ ಪರ ಎರಡನೇ ಪರಿಣಿತ ಸಾಕ್ಷೀದಾರರಾದ ಶ್ರೀ ವಿ.ಎಸ್.ಪ್ರಕಾಶ್ ರವರ ಅಫಿಡವಿಟನ್ನು ಹಿಂಪಡೆಯಲು ಹಾಗೂ ಸದರಿಯವರ ಬದಲಾಗಿ ಪ್ರೊ॥ ಲಕ್ಷ್ಮಣ್ ನಂದಗಿರಿ ರವರನ್ನು ಕರ್ನಾಟಕದ ಪರ ಸಾಕ್ಷಿದಾರರನ್ನಾಗಿಸಿ, ಶ್ರೀಯುತರ ಅಫಿಡವಿಟನ್ನು ಸರ್ವೋಚ್ಛ ನ್ಯಾಯಾಲಯದ ಮುಂದೆ ದಿನಾಂಕ 10.12.2019 ರಂದು ಸಲ್ಲಿಸಲಾಗಿದೆ. ಸದರಿ ಪ್ರಕರಣವು ದಿನಾಂಕ: 12.12.2019 ರಂದು ಸರ್ವೋಚ್ಛ ನ್ಯಾಯಾಲಯದ ರಿಜಿಸ್ಟ್ರಾರ್ ಕೋರ್ಟ್ ಮುಂದೆ ವಿಚಾರಣೆಗೆ ಬಂದಿದ್ದು, ಈ ಬಗ್ಗೆ ಮುಂದಿನ ಆದೇಶಕ್ಕಾಗಿ ಸರ್ವೋಚ್ಛ ನ್ಯಾಯಾಲಯದಲ್ಲಿ ಪಟ್ಟಿ ಮಾಡುವಂತೆ ಆದೇಶಿಸಿದೆ.<br>ಸರ್ವೋಚ್ಛ ನ್ಯಾಯಾಲಯದ ಅಂತರ್ ಜಾಲದಿಂದ ಪಡೆದ ಮಾಹಿತಿಯಂತೆ, ಸದರಿ ವಿಷಯವು |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| | | ವಿಚಾರಣೆಗೆ ಪಟ್ಟಿಯಾಗಿರುವುದಿಲ್ಲ. |
| 3. | **ಮಿಸಲೇನಿಯಸ್ ಅರ್ಜಿ (ಎಂ.ಎ) ಸಂ. 1869/2023 (ಡೈರಿ ಸಂಖ್ಯೆ: 4565/2023) ಇನ್ ಸಿವಿಲ್ ಅಪೀಲು(ಸಿ.ಎ)ಸಂ. 2453/2007 ದಿನಾಂಕ: 30.01.2023 ರಂದು ತಮಿಳುನಾಡು ರಾಜ್ಯ ಸರ್ಕಾರವು ದಾಖಲಿಸಿರುತ್ತದೆ. (ಕುಡಿಯುವ ನೀರಿನ ಪುನರುತ್ಪತ್ತಿ ನೀರಿನ ಕುರಿತು)** | ಸರ್ವೋಚ್ಚ ನ್ಯಾಯಾಲಯವು ದಿನಾಂಕ 16.02.2018 ರ ಆದೇಶದಲ್ಲಿ ರಾಜ್ಯದ ಕಾವೇರಿ ಜಲಾನಯನ ಪ್ರದೇಶಕ್ಕೆ ಹೆಚ್ಚುವರಿಯಾಗಿ 4.75 ಟಿಎಂಸಿ (consumptive use) ನೀರನ್ನು ಹಂಚಿಕೆ ಮಾಡಿದ್ದು, ಇದು ಬೆಂಗಳೂರು ನಗರ ಕುಡಿಯುವ ನೀರಿನ ಬಳಕೆಗೆ ಸಂಬಂಧಿಸಿದೆ. ಬೆಂಗಳೂರು ನಗರವು ಕಾವೇರಿ ಹಾಗೂ ದಕ್ಷಿಣ ಪಿನಾಕಿನಿ ಜಲಾನಯನ ಪ್ರದೇಶದಲ್ಲಿದೆ. ಬೆಂಗಳೂರು ನಗರಕ್ಕೆ ಕಾವೇರಿ ನದಿ ಪಾತ್ರದಿಂದ ಸರಬರಾಜು ಮಾಡಲಾಗುವ ಕುಡಿಯುವ ನೀರಿನಿಂದ ಪುನರುತ್ಪತ್ತಿಯಾಗುವ ನೀರನ್ನು (regenerated flows) ಕಾವೇರಿ ಜಲಾನಯನ ಪ್ರದೇಶಕ್ಕೆ ಹಿಂದಿರುಗಿಸುವಂತೆ ಹಾಗೂ ತ್ಯಾಜ್ಯ ನೀರನ್ನು ಕಾವೇರಿ ನದಿಗೆ ಹರಿಸುವ ಮುನ್ನ ನಿರ್ದಿಷ್ಟ ಮಾನದಂಡಗಳ ಪ್ರಕಾರ ಸಂಸ್ಕರಿಸುವಂತೆ ಪ್ರಾರ್ಥಿಸಿ ತಮಿಳುನಾಡು ರಾಜ್ಯವು ಕರ್ನಾಟಕ ರಾಜ್ಯದ ವಿರುದ್ಧ ದಿನಾಂಕ:30.01.2023 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಸಿವಿಲ್ ಅಪೀಲ್ 2453/2007 ರಲ್ಲಿ ಮಿಸೆಲಿನಿಯಸ್ ಅರ್ಜಿ (ಎಂ.ಎ) ಸಂಖ್ಯೆ 1869/2023 ಮತ್ತು ದಿನಾಂಕ: 08.05.2024 ರಂದು ಅಡಿಷನಲ್ ಅಫಿಡವಿಟ್ ಅನ್ನು ದಾಖಲಿಸಿದೆ. ದಿನಾಂಕ:31.05.2024ರಂದು ಕರ್ನಾಟಕ ರಾಜ್ಯವು ಕೌಂಟರ್ ಅಫಿಡವಿಟ್ (ಕಂಡಿಕೆವಾರು ಉತ್ತರಗಳು) ಅನ್ನು ದಾಖಲಿಸಿದೆ.<br>ಈ ಮಧ್ಯೆ, 1871/2023 ಪ್ರಕರಣವು ಸರ್ವೋಚ್ಚ ನ್ಯಾಯಾಲಯದ ತ್ರಿಸದಸ್ಯ ಪೀಠದ ಮುಂದೆ ಎಂ.ಎ. ಸಂಖ್ಯೆ: 1871/2023 ಇನ್ ಸಿ.ಎ. ಸಂಖ್ಯೆ: 2453/2007 ರೊಂದಿಗೆ ದಿನಾಂಕ: 25.08.2023ಕ್ಕೆ ವಿಚಾರಣೆಗೆ ಪಟ್ಟಿಯಾಗಿತಾದರೂ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶ ಬಂದಿರುವುದಿಲ್ಲ.<br>ದಿನಾಂಕ 21.09.2023ರಂದು 1871/2023 ಪ್ರಕರಣದ ವಿಚಾರಣೆಯನ್ನು ನಡೆಸಿದ ಸರ್ವೋಚ್ಚ ನ್ಯಾಯಾಲಯವು ದಿನಾಂಕ:21.09.2023 ರ ಆದೇಶದಲ್ಲಿ 1871/2023 ಅನ್ನು ವಜಾಗೊಳಿಸಿ ಹಾಗೂ 1869/2023 ಪ್ರಕರಣವನ್ನು ಎರಡು ವಾರಗಳ ನಂತರ ಪಟ್ಟಿ ಮಾಡಲು ತಿಳಿಸುತ್ತಾ, ಈ ಕೆಳಕಂಡಂತೆ ಆದೇಶಿಸಿದೆ:<br>"......<br>I.A. NOS. 84201/2022 & M.A. NO. 1869/2023 & REST OF THE MATTERS<br>List after two weeks."<br>ಸರ್ವೋಚ್ಚ ನ್ಯಾಯಾಲಯದ ಅಂತರ್ ಜಾಲದಿಂದ ಪಡೆದ ಮಾಹಿತಿಯಂತೆ ಸದರಿ ಪ್ರಕರಣವು ವಿಚಾರಣೆಗೆ ಪಟ್ಟಿಯಾಗಿರುವುದಿಲ್ಲ. |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| 4. | ಕಾವೇರಿ (ಕಟ್ಟಲೈ)–ವೈಗೈ–ಗುಂಡಾರ್–ನದಿ ಜೋಡಣೆಗೆ ಸಂಬಂಧಿಸಿದ ವಿವಾದದ ಬಗ್ಗೆ: | |
| | ಮೂಲ ದಾವೆ (ಒ.ಎಸ್) ಸಂಖ್ಯೆ 3/2021:<br>ದಿನಾಂಕ: 19.07.2021ರಂದು ಕರ್ನಾಟಕ ರಾಜ್ಯ ಸರ್ಕಾರವು ದಾಖಲಿಸಿರುತ್ತದೆ. (ಕಾವೇರಿ (ಕಟ್ಟಲೈ)–ವೈಗೈ–ಗುಂಡಾರ್): | ಕರ್ನಾಟಕ ರಾಜ್ಯವು ದಿನಾಂಕ 19.07.2021ರಂದು ತಮಿಳುನಾಡು ರಾಜ್ಯದ ವಿರುದ್ಧ ಮೂಲ ದಾವೆ ಸಂಖ್ಯೆ: 3/2021 ಅನ್ನು ದಾಖಲಿಸಿದ್ದು,ಇದರಲ್ಲಿ ತಮಿಳುನಾಡು ರಾಜ್ಯವು ಕಾವೇರಿ(ಕಟಲೈ)–ವೈಗೈ–ಗುಂಡಾರ್ ಕಣಿವೆಯಲ್ಲಿ ಕೈಗೊಳ್ಳುತ್ತಿರುವ ಯೋಜನೆಗೆ ತಡೆ ಕೋರಲಾಗಿರುತ್ತದೆ.<br>ತಮಿಳುನಾಡು ರಾಜ್ಯವು ದಿನಾಂಕ 03.01.2022 ರಂದು ತನ್ನ<br>1. ಲಿಖಿತ ಹೇಳಿಕೆಗಳು;<br>2. ತಾತ್ಕಾಲಿಕ ತಡೆಯಾಜ್ಞೆ ಅರ್ಜಿಗೆ ಉತ್ತರಗಳು ಮತ್ತು<br>3.ತಮಿಳುನಾಡು ರಾಜ್ಯದ ಪರವಾಗಿ ದಾಖಲಾತಿಗಳನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದೆ. ಕರ್ನಾಟಕ ರಾಜ್ಯವು ದಿ:13.05.2022 ರಂದು ತಮಿಳುನಾಡು ರಾಜ್ಯದ ಲಿಖಿತ ಹೇಳಿಕೆಗೆ Replication ಅನ್ನು ಹಾಗೂ ತಮಿಳುನಾಡು ರಾಜ್ಯದ ಅರ್ಜಿಗೆ Rejionder ಅನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದೆ.<br><br>ಕೇಂದ್ರಾಡಳಿತ ಪ್ರದೇಶ ಪುದುಚೇರಿಯು ಕರ್ನಾಟಕದ ತಾತ್ಕಾಲಿಕ ತಡೆಯಾಜ್ಞೆ ಅರ್ಜಿಗೆ ಪ್ರತ್ಯುತ್ತರವನ್ನು ಹಾಗು ಲಿಖಿತ ಹೇಳಿಕೆಯನ್ನು ದಿನಾಂಕ 21.07.2022 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದೆ. ಸದರಿ ಕೇಂದ್ರಾಡಳಿತ ಪ್ರದೇಶ ಪುದುಚೇರಿಯು ಸಲ್ಲಿಸಿದ ಪ್ರತ್ಯುತ್ತರಗಳಿಗೆ ಕರ್ನಾಟಕ ರಾಜ್ಯವು ರೆಪ್ಲಿಕೇಶನ್‌ನ್ನು ದಿನಾಂಕ 28.10.2022 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದೆ. ದಿನಾಂಕ 02.11.2022 ರಂದು ವಿಚಾರಣೆ ನಡೆಸಿದ ಸರ್ವೋಚ್ಚ ನ್ಯಾಯಾಲಯವು ಕೆಳಕಂಡಂತೆ ಆದೇಶಿಸಿದೆ: "List I.A. No. 112460/2021 along with the suit for framing of issues after six weeks. In the meantime, parties may complete their pleadings. "<br><br>ಕೇಂದ್ರ ಜಲಶಕ್ತಿ ಸಚಿವಾಲಯವು ದಿನಾಂಕ: 16.11.2022 ರಂದು ಮೂಲ ದಾವೆಗೆ ತನ್ನ ಲಿಖಿತ ಹೇಳಿಕೆಗಳನ್ನು ಸರ್ವೋಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಿದೆ. ದಿನಾಂಕ: 06.02.2023 ರಂದು ತಮಿಳುನಾಡು ರಾಜ್ಯವು ದಿನಾಂಕ: 13.05.2022 ರ ಕರ್ನಾಟಕದ ರೆಪ್ಲಿಕೇಷನ್ (Replication) ಗೆ ಪ್ರತಿಕ್ರಿಯೆಗಳನ್ನು (Response) ಅನ್ನು ಸಲ್ಲಿಸಿದೆ. ದಿನಾಂಕ:27.04.2023 ರಂದು ಕರ್ನಾಟಕ ರಾಜ್ಯವು ಕೇಂದ್ರ ಸರ್ಕಾರದ ಲಿಖಿತಹೇಳಿಕೆಗೆ ರೆಪ್ಲಿಕೇಷನ್ (Replication) ಅನ್ನು ದಾಖಲಿಸಿದೆ. ದಿನಾಂಕ 23.05.2023ರಂದು ಕೇರಳ ರಾಜ್ಯವು ಕರ್ನಾಟಕದ ಮೂಲ ದಾವೆಗೆ ಲಿಖಿತ ಹೇಳಿಕೆಗಳನ್ನು ಸಲ್ಲಿಸಿದೆ. ದಿನಾಂಕ: 19.03.2024 ರಂದು ಪ್ರಕರಣವನ್ನು ಆಲಿಸಿದ ಮಾನ್ಯ ಸರ್ವೋಚ್ಚ |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| | | ನ್ಯಾಯಾಲಯವು 8 ಚರ್ಚಾಂಶಗಳನ್ನು ಅಂತಿಮಗೊಳಿಸಿದೆ ಹಾಗೂ ಈ ಕೆಳಕಂಡಂತೆ ಆದೇಶಿಸಿದೆ:<br>**We grant time of six weeks to the parties to file the documents.**<br>**List on the top of the Board on 7th May, 2024 for directions.**<br>ಕೇರಳ ರಾಜ್ಯವು ಸಲ್ಲಿಸಿದ ಲಿಖಿತ ಹೇಳಿಕೆಗೆ ಕರ್ನಾಟಕ ರಾಜ್ಯವು ದಿನಾಂಕ:31.05.2024ರಂದು ರೆಪ್ಲಿಕೇಷನ್ ಅನ್ನು ದಾಖಲಿಸಿದೆ.<br>ಸರ್ವೋಚ್ಚ ನ್ಯಾಯಾಲಯದ ಅಂತರ್ ಜಾಲದಿಂದ ಪಡೆದ ಮಾಹಿತಿಯಂತೆ, ಸದರಿ ಪ್ರಕರಣವು ದಿನಾಂಕ: 05.08.2024ಕ್ಕೆ ಪಟ್ಟಿಯಾಗಿರುತ್ತದೆ. |
| 5. | ಮದ್ರಾಸ್ ಉಚ್ಚ ನ್ಯಾಯಾಲಯ (ಮದುರೈ ಪೀಠ) (ಮೆಟ್ಟೂರು –ಸರಭಂಗಾ ಯೋಜನೆ ಕುರಿತು) | |
| | ರಿಟ್ ಪಿಟಿಷನ್ [ಡಬ್ಲ್ಯು.ಪಿ.(ಎಂ.ಡಿ)] ಸಂಖ್ಯೆ:6972/2020<br>ಶ್ರೀ ಪಿ.ಆರ್. ಪಾಂಡ್ಯನ್, ತಮಿಳುನಾಡು ರಾಜ್ಯದ ಕಾವೇರಿ ಡೆಲ್ಟಾ ಭೂಮಿಯ ರೈತರು, | ಶ್ರೀ ಪಿ.ಆರ್. ಪಾಂಡ್ಯನ್, ಕಾವೇರಿ ಡೆಲ್ಟಾ ಭೂಮಿಯ ರೈತರು, ಇವರು ಮದ್ರಾಸ್ (ಮದುರೈ ಬೆಂಚ್) ಉಚ್ಚ ನ್ಯಾಯಾಲಯದಲ್ಲಿ, ರಿಟ್ ಪಿಟಿಷನ್ (ಎಂ.ಡಿ.) ಸಂಖ್ಯೆ: 6972/2020 ಸಲ್ಲಿಸಿದ್ದು, ತಮಿಳುನಾಡು ರಾಜ್ಯವು ಸರ್ವೋಚ್ಚ ನ್ಯಾಯಾಲಯದ 16.02.2018 ರ ಆದೇಶವನ್ನು ಉಲ್ಲಂಘಿಸಿ ಹಾಗು ಮುಖಜ ಭೂಮಿಯ ರೈತರ ಹಕ್ಕುಗಳನ್ನು ನಿರ್ಲಕ್ಷಿಸಿ ಸುಮಾರು 555 ಎಂಸಿಎಫ್‌ಟಿ ನೀರನ್ನು ಮೆಟ್ಟೂರು ಜಲಾಶಯದಿಂದ ಮೇಲೆತ್ತಿ 4238 ಎಕರೆಯ ಪ್ರದೇಶದ ಹೊಸ ಕೃಷಿ ಭೂಮಿಯನ್ನು ಅಭಿವೃದ್ಧಿಗೊಳಿಸಲು ಪ್ರಸ್ತಾಪಿಸಿರುವ ಯೋಜನೆಯನ್ನು ವಿರೋಧಿಸಿರುತ್ತಾರೆ. ರಾಜ್ಯದ ಪರವಾಗಿ ಇಂಪ್ಲೀಡಿಂಗ್ ಪಿಟಿಷನ್ ಅನ್ನು ತಮಿಳುನಾಡು ರಾಜ್ಯದ ಉಚ್ಚ ನ್ಯಾಯಾಲಯದ ಮದುರೈ ಪೀಠದಲ್ಲಿ ದಿನಾಂಕ: 07.03.2022 ರಂದು ದಾಖಲಿಸಲಾಗಿದೆ. [ಡಬ್ಲ್ಯೂ.ಎಂ.ಪಿ. (ಎಂ.ಡಿ) ಸಂಖ್ಯೆ: 3559/2022].<br>ಸದರಿ ಅರ್ಜಿ ಇನ್ನೂ ವಿಚಾರಣೆಗೆ ಬಂದಿರುವುದಿಲ್ಲ. |
| II | ಪಾಲಾರ್ ಜಲ ವಿವಾದ ಬಗ್ಗೆ: | |
| | ಮೂಲ ದಾವೆ (ಒ.ಎಸ್) ಸಂಖ್ಯೆ 3/2016, ದಿನಾಂಕ: 18.07.2016 ರಂದು ತಮಿಳುನಾಡು ರಾಜ್ಯ ಸರ್ಕಾರವು ದಾಖಲಿಸಿರುತ್ತದೆ. | ತಮಿಳುನಾಡು ರಾಜ್ಯವು ಆಂದ್ರಪ್ರದೇಶ ರಾಜ್ಯದ ವಿರುದ್ಧ ದಿನಾಂಕ: 18.07.2016 ರಂದು ಆಂದ್ರಪ್ರದೇಶ ರಾಜ್ಯವು ಕೆಲವು ಚೆಕ್ ಡ್ಯಾಂಗಳ ಎತ್ತರ ಹೆಚ್ಚಿಸುವ ಮತ್ತು ಹೊಸ ಚೆಕ್ ಡ್ಯಾಂಗಳನ್ನು ತೆಗೆಯುವಂತೆ ಹಾಗೂ ಯಾವುದೇ ಚೆಕ್ ಡ್ಯಾಂಗಳನ್ನು ಹೊಸದಾಗಿ ಕೈಗೊಳ್ಳುತ್ತಿರುವ ಯೋಜನೆಗೆ ತಡೆ ಕೋರಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆಯನ್ನು ದಾಖಲಿಸಿದೆ. ಕರ್ನಾಟಕ ರಾಜ್ಯವು, ಪಾಲಾರ್ ನದಿ ಕಣಿವೆ ರಾಜ್ಯವಾಗಿದ್ದು ಈ ದಾವೆಯಲ್ಲಿ ಎರಡನೇ ಪ್ರತಿವಾದಿಯನ್ನಾಗಿ ಮಾಡಲಾಗಿರುತ್ತದೆ. ಕರ್ನಾಟಕ ರಾಜ್ಯವು ದಿನಾಂಕ: 02.04.2018 ರಂದು ಲಿಖಿತ ಹೇಳಿಕೆಗಳನ್ನು ದಾಖಲಿಸಿದೆ. |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| | | ಸದರಿ ಪ್ರಕರಣವು ಸರ್ವೋಚ್ಚ ನ್ಯಾಯಾಲಯದ ಮುಂದೆ ದಿನಾಂಕ:10.02.2020 ರಂದು ವಿಚಾರಣೆಗೆ ಬಂದಿದ್ದು, ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿದೆ:<br>*"List along with I.A No.2/2017 on non-miscellaneous day after four weeks.."*<br>ಸರ್ವೋಚ್ಚ ನ್ಯಾಯಾಲಯದ ಅಂತರ್ ಜಾಲದಿಂದ ಪಡೆದ ಮಾಹಿತಿಯಂತೆ, ಸದರಿ ಪ್ರಕರಣವು ವಿಚಾರಣೆಗೆ ಪಟ್ಟಿಯಾಗಿರುವುದಿಲ್ಲ. |
| **III** | **ದಕ್ಷಿಣ ಪೆನ್ನಾರ್ (ಪೆನ್ನಯ್ಯಾರ್) ಕಣಿವೆ ಜಲ ವಿವಾದ ಬಗ್ಗೆ:** | |
| | ಮೂಲ ದಾವೆ (ಒ.ಎಸ್) ಸಂಖ್ಯೆ 1/2018 :<br>ದಿನಾಂಕ: 18.05.2018 ರಂದು ತಮಿಳುನಾಡು ರಾಜ್ಯ ಸರ್ಕಾರವು ದಾಖಲಿಸಿರುತ್ತದೆ. | ತಮಿಳುನಾಡು ರಾಜ್ಯವು ದಿನಾಂಕ 18.05.2018 ರಂದು ಕರ್ನಾಟಕ ರಾಜ್ಯದ ವಿರುದ್ಧ ಮೂಲ ದಾವೆ ಸಂಖ್ಯೆ: 1/2018 ಅನ್ನು ಹಾಗು I.A No.95384/2018 ಅನ್ನು ದಾಖಲಿಸಿದೆ. ಇದರಲ್ಲಿ ಕರ್ನಾಟಕ ರಾಜ್ಯವು ಪೆನ್ನಯ್ಯಾರ್ ಕಣಿವೆಯಲ್ಲಿ ಕೈಗೊಳ್ಳುತ್ತಿರುವ ಯೋಜನೆಗಳಿಗೆ ತಡೆ ಕೋರಲಾಗಿರುತ್ತದೆ. ಇದಕ್ಕೆ ಪ್ರತಿಯಾಗಿ ಕರ್ನಾಟಕ ರಾಜ್ಯವು ದಿನಾಂಕ: 14.03.2019 ರಂದು ಲಿಖಿತ ಹೇಳಿಕೆಯನ್ನು ದಾಖಲಿಸಿದೆ. ಮಾರ್ಕಂಡೇಯ ಅಣೆಕಟ್ಟು ಪ್ರದೇಶದ ಛಾಯಾ ಚಿತ್ರಗಳನ್ನು ಲಗತ್ತಿಸಿ ಹಾಗೂ ಮೂಲ ಅರ್ಜಿಯಲ್ಲಿಯ ಪ್ರಾರ್ಥನೆಗಳನ್ನು *(prayers)* ನಮೂದಿಸಿ ದಿನಾಂಕ: 03.07.2019ರಂದು ತಮಿಳುನಾಡು ರಾಜ್ಯವು ಮಧ್ಯಂತರ ಅರ್ಜಿ ಸಂಖ್ಯೆ 95384/2018 ಅನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದೆ.<br>ದಿನಾಂಕ 14.11.2019 ರಂದು ವಿಚಾರಣೆ ನಡೆಸಿದ ಸರ್ವೋಚ್ಚ ನ್ಯಾಯಾಲಯವು ಮಧ್ಯಂತರ ಅರ್ಜಿ ಸಂಖ್ಯೆ 95384/2018 ಅನ್ನು ವಜಾಗೊಳಿಸಿ ಕೆಳಕಂಡಂತೆ ಆದೇಶಿಸಿತು *(reportable judgement)* :<br>*"19. In the circumstances all we can do at this stage is to permit the plaintiff to make an appropriate application invoking the powers of the Central Government in terms of the provisions of the Act and seek constitution of an Inter State River Water Disputes Tribunal. If the plaintiff is so advised, such request may be made within four weeks from the date of this order.*<br>ದಿನಾಂಕ: 30.11.2019 ರಂದು ತಮಿಳುನಾಡು ಸರ್ಕಾರದ ಕಾರ್ಯದರ್ಶಿಗಳು, ಪಿಡಬ್ಲ್ಯುಡಿ ಇವರು |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| | | ಕಾರ್ಯದರ್ಶಿ, ಕೇಂದ್ರ ಜಲಶಕ್ತಿ ಸಚಿವಾಲಯಕ್ಕೆ ಪತ್ರವೊಂದನ್ನು ಬರೆದಿದ್ದು, ಇದರಲ್ಲಿ ಅಂತರ್ ರಾಜ್ಯ ಜಲ ವಿವಾದ ಕಾಯ್ದೆ 1956 ರ ಸೆಕ್ಷನ್ 3 ರ ಅಡಿಯಲ್ಲಿ ನ್ಯಾಯಾಧೀಕರಣವನ್ನು ರಚಿಸಲು ಹಾಗೂ ಅಂತರರಾಜ್ಯ ನದಿ ಪೆನ್ನೈಯಾರ್ ಮತ್ತು ಅದರ ಉಪನದಿಗಳ ಬಳಕೆ, ವಿತರಣೆ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದಂತೆ ದೂರು ನೀಡಿದೆ. ತಮಿಳುನಾಡು ರಾಜ್ಯವು ದಿನಾಂಕ: 16.12.2019 ರಂದು I.A. ಸಂ. 193417/2019 ಅನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿ, ಕೇಂದ್ರ ಸರ್ಕಾರಕ್ಕೆ ನ್ಯಾಯಾಧೀಕರಣವನ್ನು ರಚಿಸಲು ನಿರ್ದೇಶನ ನೀಡುವಂತೆ ಪ್ರಾರ್ಥಿಸಿದೆ. ತಮಿಳುನಾಡು ರಾಜ್ಯವು ದಿನಾಂಕ: 14.07.2022 ರಂದು IA 193417/2019 ಅಡಿಯಲ್ಲಿ additional affidavit ಅನ್ನು ದಾಖಲಿಸಿದ್ದು, ಇದಕ್ಕೆ ಉತ್ತರವಾಗಿ ಕರ್ನಾಟಕ ರಾಜ್ಯವು ದಿನಾಂಕ 12.12.2022 ರಂದು "Counter affidavit" ಅನ್ನು ದಾಖಲಿಸಿರುತ್ತದೆ. ದಿನಾಂಕ: 14.12.2022 ರ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಅನುಸರಿಸಿ ದಿನಾಂಕ 28.03.2023 ರಂದು ಕೇಂದ್ರ ಸರ್ಕಾರವು ಅಫಿಡವಿಟ್ ಅನ್ನು ಸಲ್ಲಿಸಿ ಅದರಲ್ಲಿ ಪೆನ್ನೈಯಾರ್ ನ್ಯಾಯಾಧೀಕರಣದ ರಚನೆಗೆ ಕಾಲಮಾನವನ್ನು ಸಲ್ಲಿಸಿದೆ. ಕರ್ನಾಟಕದ ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ: 03.07.2023 ರಂದು ಮಾನ್ಯ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದು ಪೆನ್ನಯ್ಯಾರ್ ಜಲ ವಿವಾದವನ್ನು ಸಂಧಾನದ ಮೂಲಕ ಬಗೆಹರಿಸಲು ನ್ಯಾಯಾಲಯದಲ್ಲಿ 12 ವಾರಗಳ ಕಾಲಾವಕಾಶವನ್ನು ಕೇಂದ್ರ ಸರ್ಕಾರವು ಕೊಡಬೇಕೆಂದು ಅರ್ಜಿ ಸಲ್ಲಿಸುವಂತೆ ಮನವಿ ಮಾಡಿರುತ್ತಾರೆ. ದಿನಾಂಕ: 02.05.2023ರ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಅನುಸರಿಸಿ ದಿನಾಂಕ 04.07.2023 ರಂದು ಕೇಂದ್ರ ಸರ್ಕಾರವು ಅಫಿಡವಿಟ್ ಅನ್ನು ಸಲ್ಲಿಸಿ ಮತ್ತೊಮ್ಮೆ ಕಾಲಾವಕಾಶವನ್ನು ಕೋರಿದೆ. ದಿನಾಂಕ: 03.10.2023 ರ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಅನುಸರಿಸಿ ದಿನಾಂಕ 10.10.2023 ರಂದು ಕೇಂದ್ರ ಸರ್ಕಾರವು ಪೆನ್ನಯ್ಯಾರ್ ಜಲ ವಿವಾದವನ್ನು ಸಂಧಾನದ ಮೂಲಕ ಬಗೆಹರಿಸಲು 12 ವಾರಗಳ ಕಾಲಾವಕಾಶವನ್ನು ಕೋರಿ ಅಫಿಡವಿಟ್ ಅನ್ನು ಸಲ್ಲಿಸಿದೆ. ಕೇಂದ್ರ ಸರ್ಕಾರವು ದಿನಾಂಕ 10.10.2023 ರಂದು ಸಲ್ಲಿಸಿರುವ ಅಫಿಡವಿಟ್‌ಗೆ ಪ್ರತಿಯಾಗಿ ತಮಿಳುನಾಡು ರಾಜ್ಯವು ದಿನಾಂಕ 13.10.2023 ರಂದು ಹಾಗೂ ಕರ್ನಾಟಕ ರಾಜ್ಯವು ದಿನಾಂಕ 14.10.2023 ರಂದು "RESPONSE" ಅನ್ನು ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿದೆ.<br><br>ದಿನಾಂಕ: 23.01.2024 ರಂದು ಪ್ರಕರಣವನ್ನು ಆಲಿಸಿದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿದೆ:<br>"8. In these circumstances, we deem it appropriate to direct the Department of Water Resources, River Development & Ganga Rejuvenation, Ministry of Jal Shakti, |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| | | Government of India to constitute a fresh Negotiation Committee, as envisaged under Section 4(1) of the ISRWD Act, 1956. The notification constituting the Committee will be issued within two weeks.<br>9. The Committee will make earnest endevour to reach a negotiated settlement of the inter-state water dispute over Penniyar river. A report on the consideration and the outcome of the exercise be given by respondent no. 2 – Union of India, within a period of three months of the constitution of the Committed. The matter be listed thereafter."<br><br>ಸದರಿ ದಿನಾಂಕ 23.01.2024ರ ಆದೇಶವನ್ನು ಅನುಸರಿಸಿ ಕೇಂದ್ರ ಜಲ ಶಕ್ತಿ ಸಚಿವಾಲಯವು ದಿನಾಂಕ: 07.02.2024ರಂದು ಸಂಧಾನ ಸಮಿತಿ (Negotiation Committee on South Pennar) ಅನ್ನು ರಚಿಸಿದೆ ಹಾಗೂ ಸಂಧಾನದ ಪ್ರಕ್ರಿಯೆಯು ಪ್ರಚಲಿತವಾಗಿದೆ.<br><br>ಸರ್ವೋಚ್ಛ ನ್ಯಾಯಾಲಯದ ಅಂತರ್ ಜಾಲದಿಂದ ಪಡೆದ ಮಾಹಿತಿಯಂತೆ ಸದರಿ ಪ್ರಕರಣವು ತಾತ್ಕಾಲಿಕವಾಗಿ ವಿಚಾರಣೆಗೆ ದಿನಾಂಕ: 16.07.2024 ರಂದು ಪಟ್ಟಿಯಾಗಿರುತ್ತದೆ. |

ಮುಖ್ಯ ಇಂಜಿನಿಯರ್ (ಅಂ.ರಾ.ಜ),
ಜ.ಸಂ.ಇ, ಬೆಂಗಳೂರು.

15/7/24 15/7

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| 1 | 2 | 3 |
| 1.ಅ. | **ಕೃಷ್ಣಾ ಜಲ ವಿವಾದ:**<br><br>**1. ವಿಶೇಷ ಮನವಿ ಅರ್ಜಿ–10498/2011 (ಸಿವಿಲ್ ಅಪೀಲ ಸಂ. 005170/2023):**<br><br>ಅಂ.ರಾ.ಜ.ವಿವಾದ ಕಾಯ್ದೆ–1956ರ ಸೆಕ್ಷನ್ 5(2) ರಡಿ 30.12.2010 ರಂದು ಕೃ.ಜ.ವಿ.ನ್ಯಾ–2ವು ನೀಡಿರುವ ಅಂತಿಮ ಆದೇಶವನ್ನೊಳಗೊಂಡಿರುವ ವರದಿಯ ಕುರಿತು ಆಂಧ್ರ ಪ್ರದೇಶ ರಾಜ್ಯವು 28.03.2011 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುತ್ತದೆ.<br><br>**2. ವಿಶೇಷ ಮನವಿ ಅರ್ಜಿ–3076–79/2014 (ಸಿವಿಲ್ ಅಪೀಲ ಸಂ. 5166–5169/2023):**<br><br>ಅಂ.ರಾ.ಜ.ವಿವಾದ ಕಾಯ್ದೆ–1956ರ ಸೆಕ್ಷನ್ 5(3) ರಡಿ 29.11.2013 ರಂದು ಕೃ.ಜ.ವಿ.ನ್ಯಾ–2ವು ನೀಡಿರುವ ಅಂತಿಮ ಆದೇಶವನ್ನೊಳಗೊಂಡಿರುವ ಮುಂದುವರೆದ ವರದಿಯ ಕುರಿತು ಆಂಧ್ರ ಪ್ರದೇಶ ರಾಜ್ಯವು 16.01.2014 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುತ್ತದೆ. | • ಅಂತರ್ ರಾಜ್ಯ ಜಲ ವಿವಾದ ಕಾಯ್ದೆ 1956 ಸೆಕ್ಷನ್ 5(2) ರಡಿ 30.12.2010 ರಂದು ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2 ನೀಡಿರುವ ಆದೇಶವನ್ನು ಪ್ರಶ್ನಿಸಿ ಆಂಧ್ರಪ್ರದೇಶ ರಾಜ್ಯವು (2014ರ ಪುನಸ್ಸಂಘಟನೆಯ ಮೊದಲು) ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಮನವಿ ಅರ್ಜಿ ಸಂಖ್ಯೆ: 10498/2011ನ್ನು ಸಲ್ಲಿಸಿದೆ. ನ್ಯಾಯಾಧಿಕರಣ–2ರ ಆದೇಶದ ಕಾರ್ಯಚರಣೆಗೆ ತಡೆಯಾಜ್ಞೆ ನೀಡುವಂತೆ ಹಾಗೂ ಅಂತರರಾಜ್ಯ ಜಲ ವಿವಾದ ಕಾಯ್ದೆ 1956ರ ಸೆಕ್ಷನ್ 5(3) ರಡಿ ಬಾಕಿ ಇರುವ ನ್ಯಾಯಾಧಿಕರಣದ ಕಲಾಪಗಳಿಗೆ ತಡೆಯಾಜ್ಞೆ ನೀಡುವಂತೆ ಕೋರುತ್ತಾ, ಆಂಧ್ರ ಪ್ರದೇಶವು ಮಧ್ಯಂತರ ಅರ್ಜಿಯನ್ನು ತನ್ನ ವಿಶೇಷ ಮನವಿ ಅರ್ಜಿಯಡಿ ಸಲ್ಲಿಸಿತ್ತು.<br><br>• ನ್ಯಾಯಾಧಿಕರಣದಲ್ಲಿ ಸೆಕ್ಷನ್ 5(3) ಅಡಿಯಲ್ಲಿ ಕಣಿವೆ ರಾಜ್ಯಗಳು ಸಲ್ಲಿಸಿರುವ ರೆಫರೆನ್ಸ್ ಅರ್ಜಿಗಳ ವಿಚಾರಣೆಯನ್ನು ತಡೆಯದೆ, ಸದರಿ ವಿಷಯಕ್ಕೆ ವಿವರವಾದ ಪರಿಗಣನೆಯ ಅಗತ್ಯವಿದೆ ಎಂದು ತಿಳಿಸುತ್ತಾ, ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2ರ ಸೆಕ್ಷನ್ 5(3) ಅಡಿಯಲ್ಲಿ ನೀಡುವ ತೀರ್ಪು/ ವರದಿಯನ್ನು ಕೇಂದ್ರ ಸರ್ಕಾರವು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು 16.09.2011 ರಂದು ಆದೇಶಿಸಿರುತ್ತದೆ.<br><br>• ಕೃಷ್ಣಾ ನ್ಯಾಯಾಧೀಕರಣದ ವರದಿ 30.12.2010 ಹಾಗೂ ಮುಂದುವರೆದ ವರದಿ 29.11.2013ಗಳ ವಿರುದ್ಧ ಆಂಧ್ರಪ್ರದೇಶ ಮತ್ತು ತೆಲಂಗಾಣ(ಆಂಧ್ರಪ್ರದೇಶ ಪುನಸ್ಸಂಘಟನಾ ಕಾಯ್ದೆ 2014 ನಂತರ ರಚನೆಯಾದ)ರಾಜ್ಯಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| 1 | 2 | 3 |
| | **3. ವಿಶೇಷ ಮನವಿ ಅರ್ಜಿ–7457–7460/2014 (ಸಿವಿಲ್ ಅಪೀಲ ಸಂ. 5173–5176/2023):**<br>ಅಂ.ರಾ.ಜ.ವಿವಾದ ಕಾಯ್ದೆ–1956ರ ಸೆಕ್ಷನ್ 5(3) ರಡಿ 29.11.2013 ರಂದು ಕೃ.ಜ.ವಿ.ನ್ಯಾ–2ವು ನೀಡಿರುವ ಅಂತಿಮ ಆದೇಶವನ್ನೊಳಗೊಂಡಿರುವ ಮುಂದುವರೆದ ವರದಿಯ ಕುರಿತು ಕರ್ನಾಟಕ ರಾಜ್ಯವು 24.02.2014 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುತ್ತದೆ.<br><br>**4. ವಿಶೇಷ ಮನವಿ ಅರ್ಜಿ–33671/2014 (ಸಿವಿಲ್ ಅಪೀಲ ಸಂ. 5178/2023)**<br><br>ಅಂ.ರಾ.ಜ.ವಿವಾದ ಕಾಯ್ದೆ–1956ರ ಸೆಕ್ಷನ್ 5(2) ರಡಿ 30.12.2010 ರಂದು ಕೃ.ಜ.ವಿ.ನ್ಯಾ–2ವು ನೀಡಿರುವ ಅಂತಿಮ ಆದೇಶವನ್ನೊಳಗೊಂಡಿರುವ ವರದಿಯ ಕುರಿತು ತೆಲಂಗಾಣ ರಾಜ್ಯವು 25.09.2014 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುತ್ತದೆ.<br>**5. ವಿಶೇಷ ಮನವಿ ಅರ್ಜಿ–33623–26/2014: (ಸಿವಿಲ್ ಅಪೀಲ ಸಂ. 5179–5182/2023)**<br><br>ಅಂ.ರಾ.ಜ.ವಿವಾದ ಕಾಯ್ದೆ–1956ರ ಸೆಕ್ಷನ್ 5(3) ರಡಿ 29.11.2013 ರಂದು ಕೃ.ಜ.ವಿ.ನ್ಯಾ–2ವು ನೀಡಿರುವ ಅಂತಿಮ ಆದೇಶವನ್ನೊಳಗೊಂಡಿರುವ ಮುಂದುವರೆದ ವರದಿಯ ಕುರಿತು ತೆಲಂಗಾಣ ರಾಜ್ಯವು 24.02.2014 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುತ್ತದೆ. | ಮನವಿ ಅರ್ಜಿಗಳನ್ನು ಹಾಗೂ ಕರ್ನಾಟಕ ರಾಜ್ಯವು ಮುಂದುವರೆದ ವರದಿಯ ಕೆಲವು ಅಂಶಗಳ ವಿರುದ್ಧ ವಿಶೇಷ ಮನವಿ ಅರ್ಜಿಯನ್ನು ಸಲ್ಲಿಸಿದ್ದು, ಇವುಗಳು ಇತ್ಯರ್ಥವಾಗಬೇಕಾಗಿವೆ.<br><br>• ಕರ್ನಾಟಕವು ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2 ನೀಡಿರುವ ತೀರ್ಪನ್ನು ಗೆಜೆಟ್‌ನಲ್ಲಿ ಪ್ರಕಟಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಲು ಕೋರಿ ಸರ್ವೋಚ್ಚ ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿ ಸಂ.30361/2019 ನ್ನು ದಾಖಲಿಸಿದೆ. ಮಹಾರಾಷ್ಟ್ರ ರಾಜ್ಯವೂ ಸಹ ಈ ಬಗ್ಗೆ ಮಧ್ಯಂತರ ಅರ್ಜಿ ಸಂ.5–8/2014 ಸಲ್ಲಿಸಿದೆ. ರಾಜ್ಯವು ತನ್ನ ಮಧ್ಯಂತರ ಅರ್ಜಿಯಡಿ ಹೆಚ್ಚುವರಿ ಶಪಥ ಪತ್ರ ಹಾಗೂ ಮುಂದುವರೆದ ಶಪಥ ಪತ್ರ ಸಲ್ಲಿಸಿ, ನ್ಯಾಯಾಧಿಕರಣ–2 ನೀಡಿರುವ ವರದಿಯ ಗೆಜೆಟ್ ಪ್ರಕಟಣೆಯನ್ನು ಕೋರಿದೆ.<br><br>• ಸದರಿ ಅರ್ಜಿಗಳು ವಿಚಾರಣೆಗಾಗಿ ಮುಖ್ಯ ನ್ಯಾಯಾಧೀಶರ ನಿರ್ದೇಶನ ಪಡೆದು ರಚನೆಯಾಗುವ ನ್ಯಾಯ ಪೀಠದ ಮುಂದೆ ಪಟ್ಟಿಯಾಗಬೇಕಾಗಿದೆ.<br><br>• ಅರ್ಜಿಗಳ ವಿಚಾರಣೆಯು 10.01.2023 ರಿಂದ 12.01.2023 ರ ವರೆಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ನಡೆದಿರುತ್ತದೆ. 10.01.2023 ಹಾಗೂ 11.01.2023ರಂದು ಕರ್ನಾಟಕದ ಪರ ಹಿರಿಯ ವಕೀಲರಾದ ಶ್ರೀ ಶ್ಯಾಮ್ ದಿವಾನ್ ಇವರು ರಾಜ್ಯದ ನಿಲುವನ್ನು ಪ್ರತಿಪಾದಿಸಿ ವಾದ ಮಂಡಿಸಿರುತ್ತಾರೆ. 11.01.2023ರಂದು ಮಹಾರಾಷ್ಟ್ರದ ಹಿರಿಯ ವಕೀಲರು ಹಾಗೂ ತೆಲಂಗಾಣದ ಹಿರಿಯ ವಕೀಲರು ತಮ್ಮ ವಾದಗಳನ್ನು ಮಂಡಿಸಿರುತ್ತಾರೆ. 12.01.2023ರಂದು ತೆಲಂಗಾಣದ ಹಿರಿಯ ವಕೀಲರ ವಾದವು ಮುಂದುವರೆದು ಅಪೂರ್ಣಗೊಂಡಿರುತ್ತದೆ.<br><br>• ಅರ್ಜಿಗಳ ವಿಚಾರಣೆಯು ದಿನಾಂಕ: 29.11.2023 ರಂದು ನ್ಯಾಯಮೂರ್ತಿಗಳಾದ ಶ್ರೀ ಸೂರ್ಯಕಾಂತ್ ಹಾಗೂ ಶ್ರೀ ದೀಪಾಂಕರ್ ದತ್ತಾ ರವರ ನ್ಯಾಯಪೀಠದ ಮುಂದೆ ವಿಚಾರಣೆಗಾಗಿ ಬಂದಿದ್ದು, ಸದರಿ ವಿಚಾರಣೆಯನ್ನು ತಾತ್ಕಾಲಿಕವಾಗಿ ಮುಂದೂಡಬೇಕೆಂಬ |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| 1 | 2 | 3 |
| | | ತೆಲಂಗಾಣದ ಪರ ವಕೀಲರ ಮನವಿಯ ಮೇರೆಗೆ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿತ್ತು.<br>*"Not for today and tomorrow."*<br>• ಸದರಿ ಅರ್ಜಿಗಳ ತ್ವರಿತ ವಿಚಾರಣೆಗಾಗಿ ಪಟ್ಟಿ ಮಾಡುವಂತೆ ಕೋರಿ ರಾಜ್ಯದ ಪರ ಅಡ್ವೋಕೇಟ್ ಆನ್ ರೆಕಾರ್ಡರವರು ರಿಜಿಸ್ಟ್ರಾರ್, ಸರ್ವೋಚ್ಚ ನ್ಯಾಯಾಲಯ ಇವರಿಗೆ 22.05.2024ರಂದು ಪತ್ರ ಬರೆದಿರುತ್ತಾರೆ.<br>• ವಿಚಾರಣೆಯ ಮುಂದಿನ ದಿನಾಂಕವನ್ನು ನಿರೀಕ್ಷಿಸಲಾಗಿದೆ.<br>• ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2ರ ವರದಿ/ ಅಂತಿಮ ಆದೇಶವನ್ನು ಗೆಜೆಟ್‌ನಲ್ಲಿ ಪ್ರಕಟಿಸುವಂತೆ ಕೋರಿ ಕರ್ನಾಟಕದ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಜಲ ಸಂಪನ್ಮೂಲ ಸಚಿವರು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಲವಾರು ಬಾರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುತ್ತಾರೆ. |
| ಆ. | **ರಿಟ್ ಅರ್ಜಿ ಸಂ.545/2015:**<br>ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2ಕ್ಕೆ ತನ್ನ ದೂರನ್ನು ವಹಿಸಲು ಕೋರುತ್ತ ಅಥವಾ ನೂತನ ನ್ಯಾಯಾಧಿಕರಣ ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿ ತೆಲಂಗಾಣ ರಾಜ್ಯವು ಸರ್ವೋಚ್ಚ ನ್ಯಾಯಾಲಯದ ಮುಂದೆ ರಿಟ್ ಅರ್ಜಿ (ಸಂಖ್ಯೆ: 545/2015)ಯನ್ನು ಸಲ್ಲಿಸಿತ್ತು. | • ತೆಲಂಗಾಣ ರಾಜ್ಯವು ರಿಟ್ ಅರ್ಜಿ ಸಂಖ್ಯೆ: 545/2015ಯನ್ನು ಹಿಂಪಡೆಯಲು ಅನುಮತಿ ಕೋರಿ ಸರ್ವೋಚ್ಚ ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಿದ್ದು, ವಿಚಾರಣೆಯು ದಿನಾಂಕ: 06.10.2021 ರಂದು ನಡೆದಿದ್ದು, ನ್ಯಾಯಾಲಯವು *"....5. In view of the fact that the State of Telangana does not seek to press its petition under Article 32, it **is disposed of as withdrawn."*** ಎಂದು ಆದೇಶಿಸಿರುತ್ತದೆ.<br>• ಸದರಿ ಅರ್ಜಿಯು ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ವಿಲೇವಾರಿಯಾಗಿರುತ್ತದೆ. |
| ಇ. | **ರಿಟ್ ಅರ್ಜಿ ಸಂಖ್ಯೆ:1105/2019:**<br>ಡಾ.ಅಮೋಲ್ ಪವಾರ್‌ಇವರು 26.08.2019 ರಂದು ಕೇಂದ್ರ ಸರ್ಕಾರ | • ಸದರಿ ರಿಟ್ ಅರ್ಜಿಯಲ್ಲಿ ಅರ್ಜಿದಾರರು *"excess storage of water by all the dams on river Krishna and its tributaries in State of Maharashtra and Karnataka* |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| 1 | 2 | 3 |
| | ಹಾಗೂ ಇತರರ ವಿರುದ್ಧ ರಿಟ್ ಅರ್ಜಿ ಸಂಖ್ಯೆ 1105/2019 ದಾಖಲಿಸಿದ್ದರು. ಕರ್ನಾಟಕ ರಾಜ್ಯವನ್ನೂ ಒಂದು ಪ್ರತಿವಾದಿಯನ್ನಾಗಿ ಮಾಡಲಾಗಿದೆ. | *is in violation of said guidelines. Dams in Maharashtra has suddenly discharged huge quantity of water in the rivers after 4th August, which increased gravity and seriousness of the flood"* ಎಂದು ದೂರಿರುತ್ತಾರೆ.<br>• ಕರ್ನಾಟಕ ರಾಜ್ಯದ ಪರವಾಗಿ 16.12.2019ರಂದು ಉತ್ತರ ಸಲ್ಲಿಸಲಾಗಿತ್ತು.<br>• ಸದರಿ ರಿಟ್ ಅರ್ಜಿಯು 10.07.2023 ರಂದು ವಿಚಾರಣೆಗೆ ಬಂದಾಗ ಈ ರೀತಿ ಆದೇಶಿಸಿದೆ *'disposed of the Writ Petition as withdrawn by the petitioner with a liberty to approach the jurisdictional High Court for the reliefs claimed in writ petition'*.<br>• ಸದರಿ ಅರ್ಜಿಯು ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ವಿಲೇವಾರಿಯಾಗಿರುತ್ತದೆ. |
| ಈ. | **ಮೂಲ ದಾವೆ ಸಂಖ್ಯೆ: 4/2023** :<br>ಆಂಧ್ರ ಪ್ರದೇಶ ರಾಜ್ಯವು ಕರ್ನಾಟಕ ರಾಜ್ಯದ ವಿರುದ್ಧ ಭದ್ರಾ ಮೇಲ್ದಂಡೆ ಯೋಜನೆ ಕಾಮಾಗಾರಿ ಕುರಿತು ದಾವೆ ದಾಖಲಿಸಿರುತ್ತದೆ. | • ಆಂಧ್ರ ಪ್ರದೇಶ ರಾಜ್ಯವು ಕರ್ನಾಟಕ ರಾಜ್ಯದ ವಿರುದ್ಧ ಭದ್ರಾ ಮೇಲ್ದಂಡೆ ಯೋಜನೆ ಕಾಮಾಗಾರಿ ವಿರೋಧಿಸಿ ಮೂಲದಾವೆ ದಾಖಲಿಸಿರುತ್ತದೆ.<br>• ಸರ್ವೋಚ್ಚ ನ್ಯಾಯಾಲಯದ ಆದೇಶ ದಿನಾಂಕ 03.11.2023 ರಂತೆ ಸದರಿ ಮೂಲ ದಾವೆಗೆ ಕರ್ನಾಟಕದ ಪರವಾಗಿ ಲಿಖಿತ ಹೇಳಿಕೆಗಳನ್ನು ಕಂಡಿಕೆವಾರು ಉತ್ತರಗಳೊಂದಿಗೆ 02.01.2024 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದೆ. ತೆಲಂಗಾಣ ಹಾಗೂ ಮಹಾರಾಷ್ಟ್ರ ರಾಜ್ಯಗಳು ಸಹ ತಮ್ಮ ಲಿಖಿತ ಹೇಳಿಕೆಗಳನ್ನು ಸಲ್ಲಿಸಿವೆ. ಕೇಂದ್ರ ಸರ್ಕಾರವು ಸಹ ಉತ್ತರದ ಶಪಥ ಪತ್ರವನ್ನು ದಾಖಲಿಸಿದೆ. |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| 1 | 2 | 3 |
| | | • ದಿನಾಂಕ:29-01-2024ರಂದು ಸದರಿ ಮೂಲ ದಾವೆಯು ಸರ್ವೋಚ್ಚ ನ್ಯಾಯಾಲಯದಲ್ಲಿ, ವಿಚಾರಣೆಗೆ ಬಂದಿದ್ದು, ಸದರಿ ಲಿಖಿತ ಹೇಳಿಕೆಗಳಿಗೆ ಉತ್ತರದ ಅರ್ಜಿಯನ್ನು ದಾಖಲಿಸಲು ನಾಲ್ಕು ವಾರಗಳ ಸಮಯಾವಕಾಶವನ್ನು ನೀಡಿ ಆದೇಶಿಸಿರುತ್ತದೆ.<br>• ರಾಜ್ಯವು ಆಂಧ್ರಪ್ರದೇಶದ ಮೂಲದಾವೆ ಸಂಖ್ಯೆ: 4/2023 ಅಡಿಯಲ್ಲಿ ದಾಖಲಿಸಿರುವ ಮಧ್ಯಕಾಲೀನ ಅರ್ಜಿ ಸಂಖ್ಯೆ: 49102/2023ಗೆ ಪ್ರತಿಶಪಥ ಪತ್ರವನ್ನು 28.02.2024ರಂದು ನ್ಯಾಯಾಲಯದಲ್ಲಿ ದಾಖಲಿಸಿದೆ.<br>• ವಿಚಾರಣೆಯ ಮುಂದಿನ ದಿನಾಂಕವನ್ನು ನಿರೀಕ್ಷಿಸಲಾಗಿದೆ. |
| 2.ಅ | <u>**ಮಹದಾಯಿ ಜಲ ವಿವಾದ:**</u><br>**1. ವಿಶೇಷ ಮನವಿ ಅರ್ಜಿ–32517/2018 (ಸಿವಿಲ್ ಅಪೀಲ ಸಂ.2632/2024)**<br>ಮ.ಜ.ವಿ.ನ್ಯಾಯಾಧಿಕರಣವು 14.08.2018 ರಂದು ನೀಡಿರುವ ವರದಿ ಹಾಗೂ ತೀರ್ಪಿನ ವಿರುದ್ಧ ಕರ್ನಾಟಕ ರಾಜ್ಯವು 12.11.2018ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತದೆ.<br>**2. ವಿಶೇಷ ಮನವಿ ಅರ್ಜಿ– 32517/2018 (ಸಿವಿಲ್ ಅಪೀಲ ಸಂ. 4504/2023)**<br>ಮ.ಜ.ವಿ.ನ್ಯಾಯಾಧಿಕರಣವು 14.08.2018 ರಂದು ನೀಡಿರುವ ವರದಿ ಹಾಗೂ ತೀರ್ಪಿನ ವಿರುದ್ಧ ಮಹಾರಾಷ್ಟ್ರ ರಾಜ್ಯವು 12.11.2018ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತದೆ. | • ಕೇಂದ್ರ ಸರ್ಕಾರವು ದಿನಾಂಕ: 27.02.2020 ರಂದು ಮಹದಾಯಿ ಜಲ ವಿವಾದ ನ್ಯಾಯಾಧಿಕರಣದ ಆದೇಶ 14.08.2018 ರಂದು ನೀಡಿರುವ ತೀರ್ಪು/ವರದಿಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿರುತ್ತದೆ.<br>• ಮಹದಾಯಿ ಜಲವಿವಾದ ನ್ಯಾಯಾಧಿಕರಣದ ದಿನಾಂಕ: 14.08.2018ರ ತೀರ್ಪಿಗೆ ಚಾಲನೆ ನೀಡಲು ಕೇಂದ್ರ ಜಲ ಶಕ್ತಿ ಸಚಿವಾಲಯವು Mahadayi PRAWAH-Progressive River Authority for Welfare and Harmony ಸೃಜಿಸಲು ಯೋಜನೆಯನ್ನು 22.05.2023ರ ಗೆಜೆಟ್ ಅಧಿಸೂಚನೆಯನ್ನು ಹೊರಡಿಸಿದೆ.<br>• ಕಣಿವೆ ರಾಜ್ಯಗಳು "Written Submissions" ನ್ನು ಸರ್ವೋಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಿವೆ.<br>• ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ "Convenience Compilation" ನ್ನು ಸಲ್ಲಿಸಲಾಗಿದೆ.<br>• ರಾಜ್ಯದ ಮಾನ್ಯ ಉಪ ಮುಖ್ಯ ಮಂತ್ರಿಗಳು ಮಾನ್ಯ ಕೇಂದ್ರ ಜಲಶಕ್ತಿ ಮಂತ್ರಿಗಳಿಗೆ 20.06.2023ರಂದು ಬರೆದ ಪತ್ರದಲ್ಲಿ ಕಳಸಾ-ಬಂಡೂರಿ ನಾಲಾ ಕುಡಿಯುವ ನೀರಿನ ಯೋಜನೆಗಳ (ಲಿಫ್ಟ್ ಯೋಜನೆಗಳು) ಪ್ರಾರಂಭ/ತ್ವರಿತ ಅನುಷ್ಠಾನಕ್ಕಾಗಿ ಜಲ ಶಕ್ತಿ ಸಚಿವಾಲಯ/ಕೇಂದ್ರ ಜಲ ಆಯೋಗದ ಸಂಬಂಧಿತ ಪ್ರಾಧಿಕಾರಗಳಿಗೆ ಸದರಿ ಯೋಜನೆಗಳಿಗೆ ಕೋರಿರುವ ಅನುಮೋದನೆ/ತೀರುವಳಿಗಳನ್ನು ನೀಡುವಂತೆ ಕೋರಿರುತ್ತಾರೆ. |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| 1 | 2 | 3 |
| | **3. ವಿಶೇಷ ಮನವಿ ಅರ್ಜಿ–19312/2019: (ಸಿವಿಲ್ ಅಪೀಲ ಸಂ. 4505/2023)**<br><br>ಮ.ಜ.ವಿ.ನ್ಯಾಯಾಧಿಕರಣವು 14.08.2018 ರಂದು ನೀಡಿರುವ ವರದಿ ಹಾಗೂ ತೀರ್ಪಿನ ವಿರುದ್ಧ ಗೋವಾ ರಾಜ್ಯವು 18.07.2019ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತದೆ. | • ಕಳಸಾ ನಾಲಾ ತಿರುವು ಯೋಜನೆ (ಲಿಫ್ಟ್ ಯೋಜನೆ) ತೀರುವಳಿಗಾಗಿ ಅಪರ ಮುಖ್ಯ ಕಾರ್ಯದರ್ಶಿಗಳು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುತ್ತಾರೆ.<br>• ಸರ್ವೋಚ್ಚ ನ್ಯಾಯಾಲಯವು ದಿನಾಂಕ 08.02.2024 ರಂದು ಈ ಕೆಳಗಿನಂತೆ ಆದೇಶ ನೀಡಿರುತ್ತದೆ.<br><br>*" Leave granted in SLP(C) No. 33018/2018.*<br><br>*Convenience compilation(s) has been filed by the State of Goa.*<br><br>*Learned Senior Advocate for the State of Karnataka submits that they would like to file additional papers/documents. The needful may be done within a period of three weeks from today.*<br><br>*Learned counsel for the parties will nominate a nodal counsel for the bookmarking of the convenience compilation(s). During the course of arguments, only the convenience compilation(s) will be referred.*<br><br>*Parties are at liberty to file additional written submissions not exceeding ten pages, within a period of eight weeks from today.*<br><br>*I.A. Nos. 146318 of 2023 and 151782 of 2023 in Civil Appeal no. 4505 of 2023 for permission to file additional documents/facts/annexures are allowed, subject to all just exceptions.*<br><br>*Re-list all the matters in the week commencing 05.08.2024."*<br>• ವಿಚಾರಣೆಯ ಮುಂದಿನ ದಿನಾಂಕವನ್ನು 05.08.2024 ರಂದು ನಿಗಧಿಪಡಿಸಲಾಗಿದೆ.<br>• |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| 1 | 2 | 3 |
| ಆ | **ನಿಂದನಾ ಅರ್ಜಿಗಳು(Contempt petition):**<br>**1. ನಿಂದನಾಅರ್ಜಿ ಸಂಖ್ಯೆ: 2113/2018:**<br>ಸರ್ವೋಚ್ಚ ನ್ಯಾಯಾಲಯದ ಆದೇಶ ದಿ.30.04.2008 ಹಾಗೂ 27.08.2008ಗಳನ್ನು ಕರ್ನಾಟಕವು ಉಲ್ಲಂಘಿಸಿದೆಯೆಂದು ಆಪಾದಿಸುತ್ತಾ ಕರ್ನಾಟಕ ರಾಜ್ಯದ ವಿರುದ್ಧ ಗೋವಾ ರಾಜ್ಯವು 08.08.2018 ರಂದು ಮೂಲ ದಾವೆ ಸಂಖ್ಯೆ 4/2006 ರಡಿ ನಿಂದನಾ ಅರ್ಜಿ ಸಲ್ಲಿಸಿರುತ್ತದೆ.<br>**2. ನಿಂದನಾ ಅರ್ಜಿ ಸಂಖ್ಯೆ: 724/2020:**<br>ಕನಾಟಕವು ಮಹದಾಯಿ ನದಿ ನೀರನ್ನು ಮಲಪ್ರಭಾ ನದಿಗೆ ತಿರುವುಗೊಳಿಸುತ್ತಿದೆಯಂದು ಆಪಾದಿಸುತ್ತಾ ಗೋವಾ ರಾಜ್ಯವು 6.10.2020 ರಂದು ವಿಶೇಷ ಮನವಿ ಅರ್ಜಿ ಸಂಖ್ಯೆ 19312/2019 ಕರ್ನಾಟಕದ ವಿರುದ್ಧ ಸಲ್ಲಿಸಿರುತ್ತದೆ. | • ಗೋವಾ ರಾಜ್ಯವು ದಾಖಲಿಸಿದ ನಿಂದನಾ ಅರ್ಜಿ: 2113/2018 ಗೆ ಕುರಿತಾದ ನೋಟೀಸ್ ಅನ್ನು ನ್ಯಾಯಾಲಯವು ನೀಡಿರುವುದಿಲ್ಲ. ಆದ್ದರಿಂದ ಸಂಬಂಧಿತ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ.<br>• ಸರ್ವೋಚ್ಚ ನ್ಯಾಯಾಲಯದ ದಿ:20.02.2021 ರ ಆದೇಶದಂತೆ ಮೂರೂ ಕಣಿವೆ ರಾಜ್ಯಗಳ ಅಧೀಕ್ಷಕ ಇಂಜಿನಿಯರ್‌ಗಳನ್ನು ಒಳಗೊಂಡ ತಂಡವು ಕಳಸಾ ಸಂಪರ್ಕದ ಕಾಲುವೆಯನ್ನು ಪರಿವೀಕ್ಷಿಸಿ ತಮ್ಮ ವರದಿಯನ್ನು ನೀಡಿರುತ್ತಾರೆ.<br>• ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಈ ಎರಡೂ ನಿಂದನಾ ಅರ್ಜಿಗಳು ಮಹದಾಯಿ ಜಲ ವಿವಾದಕ್ಕೆ ಸಂಬಂಧಿಸಿದ ಮೇಲಿನ ಎಸ್.ಎಲ್.ಪಿ.ಗಳೊಂದಿಗೆ ವಿಚಾರಣೆಗಾಗಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಪಟ್ಟಿಯಾಗುತ್ತಿವೆ. |
| 3. | **ಉತ್ತರ ಪೆನ್ನಾರ್ ಜಲ ವಿವಾದ:**<br>**1.ಮೂಲದಾವೆ ಸಂಖ್ಯೆ:5/2003**<br>ಉತ್ತರ ಪೆನ್ನಾರ್ ನದಿ ಕಣಿವೆಯಲ್ಲಿ ರಾಜ್ಯವು ಕೈಗೊಂಡಿರುವ ಪರಗೋಡು ಹಾಗೂ ಇತರೆ ಸಣ್ಣ ನೀರಾವರಿ ಯೋಜನೆಗಳ ವಿರುದ್ಧ ಆಂದ್ರಪ್ರದೇಶ ರಾಜ್ಯವು ಮೂಲದಾವೆ ಸಂಖ್ಯೆ:5/2003ನ್ನು ದಾಖಲಿಸಿದೆ. | • ಉತ್ತರ ಪೆನ್ನಾರ್ ನದಿ ಕಣಿವೆಯಲ್ಲಿ ರಾಜ್ಯವು ಕೈಗೊಂಡಿರುವ ಪರಗೋಡು ಹಾಗೂ ಇತರೆ ಸಣ್ಣ ನೀರಾವರಿ ಯೋಜನೆಗಳ ವಿರುದ್ಧ ಆಂದ್ರಪ್ರದೇಶ ರಾಜ್ಯವು ಮೂಲದಾವೆ ಸಂಖ್ಯೆ:5/2003ನ್ನು ದಾಖಲಿಸಿದೆ.<br>• ಸದರಿ ದಾವೆಯು ದಿನಾಂಕ:28.09.2022ರಂದು ವಿಚಾರಣೆಗೆ ಬಂದಾಗ, ಸದರಿ ವಿಷಯವನ್ನು ಪರಿಗಣಿಸಲು ಆಂದ್ರಪ್ರದೇಶ ರಾಜ್ಯವು ಹೊಸದಾಗಿ ಕೇಂದ್ರ ಸರ್ಕಾರವನ್ನು ಸಂಪರ್ಕಿಸಿರುವುದು ಸೇರಿದಂತೆ ಅಂತರ ರಾಜ್ಯ ಜಲ ವಿವಾದ ಕಾಯ್ದೆಯಂತೆ ನ್ಯಾಯಾಧಿಕರಣ ರಚನೆಗೆ ಕೋರಲು ಸೂಕ್ತ ಕ್ರಮ ಕೈಗೊಳ್ಳಲು ಆಂದ್ರಪ್ರದೇಶಕ್ಕೆ ಸ್ವಾತಂತ್ರ್ಯ ನೀಡುತ್ತಾ, ಸದರಿ ಮೂಲದಾವೆಯನ್ನು ಸರ್ವೋಚ್ಚ ನ್ಯಾಯಾಲಯವು ವಿಲೇವಾರಿ ಮಾಡಿರುತ್ತದೆ. |

| ಕ್ರಮ ಸಂಖ್ಯೆ | ಅರ್ಜಿ ಸಂಖ್ಯೆ ಮತ್ತು ಅರ್ಜಿದಾರರ ವಿವರ | ಪ್ರಸ್ತುತ ಹಂತ |
|---|---|---|
| 1 | 2 | 3 |
| 4. | **ಗೋದಾವರಿ ಜಲ ವಿವಾದ:** ಆಂಧ್ರ ಪ್ರದೇಶದ ಪೋಲ್ಲಾವರಂ ಯೋಜನೆ ಕುರಿತಾಗಿ<br><br>1. ಮೂಲ ದಾವೆ–ಸಂ.4/2007<br>2. ಮೂಲ ದಾವೆ–ಸಂ.1/2019 | • ಆಂಧ್ರ ಪ್ರದೇಶದ ಪೋಲ್ಲಾವರಂ ಯೋಜನೆಯಿಂದಾಗಿ ಓರಿಸ್ಸಾ ರಾಜ್ಯದ ಪ್ರದೇಶಗಳು ಮುಳುಗಡೆಯಾಗುವ ಕುರಿತಾಗಿ ಓರಿಸ್ಸಾ ರಾಜ್ಯವು ಮೂಲ ದಾವೆ ಸಂಖ್ಯೆ 4/2007 ಅನ್ನು ಆಂಧ್ರ ಪ್ರದೇಶ ರಾಜ್ಯದ ವಿರುದ್ಧ ದಾಖಲಿಸಿರುತ್ತದೆ.<br><br>• ಗೋದಾವರಿ ಜಲ ವಿವಾದ ನ್ಯಾಯಾಧಿಕರಣದ ಆದೇಶದಂತೆ ಪೋಲ್ಲಾವರಂ ಯೋಜನೆಯಿಂದ ನೀರನ್ನು ವಿಜಯವಾಡಕ್ಕೆ ತಿರುವು ಮಾಡುವುದರಿಂದ ಕರ್ನಾಟಕ ರಾಜ್ಯಕ್ಕೆ ಲಭ್ಯವಾಗುವ ನೀರಿನ ಪ್ರಮಾಣದಲ್ಲಿ ವ್ಯತ್ಯಯವಾಗುವುದರಿಂದ ಈ ದಾವೆಯಲ್ಲಿ ಭಾಗಿಯಾಗಲು ಮಧ್ಯ ಪ್ರವೇಶಕ್ಕೆ ಕರ್ನಾಟಕ ರಾಜ್ಯವು ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿದೆ.<br><br>• ಸದರಿ ದಾವೆಯಲ್ಲಿ ಕರ್ನಾಟಕವು ಸಹ ಕಕ್ಷಿದಾರ ಆಗಿದೆ. ಮೂಲ ದಾವೆಗೆ ಸಂಬಂಧಿಸಿದಂತೆ "Written Statement" ನ್ನು ರಾಜ್ಯದ ಪರವಾಗಿ ಸಲ್ಲಿಸಲಾಗಿರುತ್ತದೆ.<br>• ತೆಲಂಗಾಣ ರಾಜ್ಯವು ಆಂಧ್ರ ಪ್ರದೇಶದ ಪೋಲ್ಲಾವರಂ ಯೋಜನೆಯಿಂದಾಗಿ 100 ಕ್ಕೂ ಹೆಚ್ಚು ಹಳ್ಳಿಗಳು ಮತ್ತು ಪಾರಂಪರಿಕ ಸ್ಥಳಗಳು ಮುಳುಗಡೆ ಹೊಂದುವ ಕುರಿತಾಗಿ ಮೂಲ ದಾವೆ ಸಂಖ್ಯೆ 1/2019 ಅನ್ನು ಕೇಂದ್ರ ಸರ್ಕಾರದ ವಿರುದ್ಧ ದಾಖಲಿಸಿದೆ.<br>• ಸದರಿ ದಾವೆಗಳ ವಿಷಯವು ತೆಲಂಗಾಣ ಮತ್ತು ಆಂಧ್ರ ಪ್ರದೇಶ ಮಧ್ಯ ಇರುವುದರಿಂದ ಕರ್ನಾಟಕ ರಾಜ್ಯವು ಕೇವಲ ಕಣಿವೆ ರಾಜ್ಯವಾಗಿರುತ್ತದೆ.<br>• ಸದರಿ ಮೂಲ ದಾವೆಯನ್ನು ತದನಂತರ ಸರ್ವೋಚ್ಚ ನ್ಯಾಯಾಲಯವು ಮೂಲ ದಾವೆ ಸಂಖ್ಯೆ 4/2007 ರೊಂದಿಗೆ ಪಟ್ಟಿ ಮಾಡಲು ಸೂಚಿಸಿದೆ.<br>• ವಿಚಾರಣೆಯ ಮುಂದಿನ ದಿನಾಂಕವನ್ನು ನಿರೀಕ್ಷಿಸಲಾಗಿದೆ. |

B.K. Na...

ಮುಖ್ಯ ಇಂಜಿನಿಯರ್ (ಅಂ.ಶಾ.ಜ),
ಜ.ಸಂ.ಇ., ಬೆಂಗಳೂರು.

ಅನುಬಂಧ-2

# STATEMENT SHOWING THE DETAILS OF PROFESSIONAL FEE PAID TO ADVOCATES IN CAUVERY,SOUTH PENNAR,PALAR BASIN RELATED INTER STATE WATER DISPUTES UPTO 2024-25

| Sl. N | Name of the Advocates | Total Expenditure (In Rs.) |
|---|---|---|
| 1 | Advocate General | 3,21,73,775 |
| 2 | F.S.Nariman, Senior Advocate | 16,83,78,500 |
| 3 | S.S.Javali, Senior Advocate | 5,50,12,968 |
| 4 | M.V.Katarki, Senior Advocate | 8,07,50,618 |
| 5 | Y.S.Chitale | 18,93,100 |
| 6 | A.Y.Chitale | 2,61,600 |
| 7 | S.C.Sharma | 1,66,55,450 |
| 8 | T.R.Andhyarujina | 12,06,000 |
| 9 | Anil B.Divan | 15,20,18,413 |
| 10 | Shyam Divan | 3,81,00,000 |
| 11 | D.M.Nargolkar | 2,27,000 |
| 12 | Syed Naqvi | 19,51,250 |
| 13 | M.Veerappa | 1,16,000 |
| 14 | S.P.Singh | 2,53,58,550 |
| 15 | Ashok Mathur | 3,000 |
| 16 | Padmanabha Male | 58,700 |
| 17 | Nanjappa Ganapathi | 65,000 |
| 18 | Sanjay R.Hegde | 21,85,000 |
| 19 | Ranvir Singh | 81,17,975 |
| 20 | Brijesh Kalappa | 1,48,63,946 |
| 21 | V.N.Raghupathy | 1,27,65,350 |
| 22 | R.S.Ravi | 1,00,90,000 |
| 23 | Brijesh Kalappa | 38,20,000 |
| 24 | J.M.Gangadhar | 63,45,000 |
| 25 | Abdul Azeem Kalebudde | 42,60,000 |
| 26 | Shubhranshu Paddhi, AOR, NGT | 50,000 |
| 27 | Mayank Jain | 0 |
| | **TOTAL:** | **63,67,27,195** |

B.K.Na...
Chief Engineer(ISW)
Water Resources Department
Bengaluru

15/7/24

## STATEMENT SHOWING THE DETAILS OF PROFESSIONAL FEE PAID TO ADVOCATES IN KRISHNA, MAHADAYI, GODAVARI AND NORTH PENNAR BASIN RELATED INTER STATE WATER DISPUTES
## (From 01.04.2005 to 15.07.2024)

| Sl. No. | Name of the Advocates | Total Expenditure (In Rs.) |
|---|---|---|
| 1 | K.L.Manjunath, Justice (Retd) | 1,21,863 |
| 2 | Raghupathy.V.N, Advocate-on-record | 85,08,891 |
| 3 | Ashok Harnahalli, Advocate General | 2,10,000 |
| 4 | Vijaya Shankar, Advocate General | 13,00,000 |
| 5 | Ravivarma Kumar, Advocate General | 64,88,251 |
| 6 | Madhusudan.R.Nayak, Advocate General | 82,99,875 |
| 7 | Parthasarathi, Advocate General | 1,50,000 |
| 8 | Udaya Holla, Advocate General | 1,22,17,516 |
| 9 | Prabhulinga.K.Navadagi, Advocate General | 44,70,000 |
| 10 | Shashikiran Shetty. Advocate General | 30,75,000 |
| 11 | Mohan V Katarki, Senior Advocate | 11,87,27,725 |
| 12 | F.S. Nariman, Senior Advocate | 14,34,81,917 |
| 13 | Shyam Diwan, Senior Advocate | 3,00,47,566 |
| 14 | Indra Jai Singh, Senior Advocate | 19,50,000 |
| 15 | S.C Sharma, Senior Advocate | 1,97,52,000 |
| 16 | S.S. Javali, Senior Advocate | 8,08,88,365 |
| 17 | Ashok Desai, Senior Advocate | 1,13,44,000 |
| 18 | Udaya Holla, Senior Advocate | 39,40,109 |
| 19 | Ranvir Singh, Advocate | 1,03,46,156 |
| 20 | Basavaprabhu Patil, Advocate | 1,08,82,626 |
| 21 | R.S.Pappu, Advocate | 1,18,47,453 |
| 22 | Brijesh Kalappa, Advocate | 5,34,81,182 |
| 23 | R.S Ravi, Advocate | 93,96,498 |
| 24 | Gurudatt Ankolekar, Advocate | 1,24,81,300 |
| 25 | Smt Anitha Shenoy, Advocate | 3,25,34,113 |
| 26 | Sanjay.R.Hegde, Advocate | 10,62,000 |
| 27 | Nishant Patil, Advocate | 2,03,06,401 |
| 28 | M.B Zirali, Advocate | 2,01,10,121 |
| 29 | Kashi Vishweshwar, Advocate | 1,51,30,093 |
| 30 | Rajeshwar.P.N, Advocate | 3,61,357 |
| 31 | Ashwin Chikkmatt, Advocate | 57,26,058 |
| 32 | Mayank Jain, Advocate | 3,00,000 |
| | TOTAL | 65,89,38,437 |

B.K.Na[signature]
Chief Engineer(ISW)
Water Resources Department
Bengaluru
15/7/24